36(43) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :– ಮಾನ್ಯ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಡುಪಿ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಮತ್ತು ಯಾವ ಯಾವ ಹ್ಯಾಮ್‌ಲೆಟ್‌ಗಳಲ್ಲಿ ಗ್ರಾಮೀಣ ವಿದ್ಯುತ್ ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು ; (ಅದರಲ್ಲಿನ ಫಲಾನುಭವಿಗಳ ವಿವರ ಒದಗಿಸುವುದು)

ಆ) ಈ ಹ್ಯಾಮ್‌ಲೆಟ್ ಯೋಜನೆಗಳಿಗೆ ವಿದ್ಯುತ್ ಸರಬರಾಜು ಮಾಡುವ ಮಂಜೂರಾತಿ ಯಾವ ಯಾವ ವರ್ಷಗಳಲ್ಲಿ ನೀಡಲಾಗಿದೆ ; ಇವುಗಳ ಅನುಷ್ಠಾನದಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ ; (ವಿವರ ನೀಡುವುದು)

(ಇ) ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುತ್ ಸರಬರಾಜು ಯೋಜನೆಯ ಗ್ರಾಮಗಳ ಪ್ರದೇಶಗಳ ಅನುದಾನದ ವಿವರವೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಇಂಧನ ಸಚಿವರು):–

ಅ) ಮತ್ತು ಆ) ಉಡುಪಿ ಜಿಲ್ಲೆಯಲ್ಲಿ ವಿದ್ಯುದೀಕರಿಸಲು ಯೋಜನೆ ಇರುವ ಹ್ಯಾಮ್‌ಲೆಟ್‌ಗಳ ಗ್ರಾಮವಾರು, ಫಲಾನುಭವಿವಾರು, ವಿದ್ಯುತ್ ಮಂಜೂರಾತಿಯ ವರ್ಷ ಹಾಗೂ ಅನುಷ್ಠಾನದಲ್ಲಿ ಇದುವರೆವಿಗೆ ಸಾಧಿಸಲಾಗಿರುವ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾವಾರು ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಪತ್ರ ಸಂಖ್ಯೆ ಇಎನ್ 52 ಇಇಬಿ 2005 ದಿನಾಂಕ 07–2–2008ರ ಮೂಲಕ ಗ್ರಾಮೀಣ ವಿದ್ಯುದೀಕರಣ ನಿಗಮ, ಬೆಂಗಳೂರು ರವರಿಗೆ ಸಲ್ಲಿಸಲಾಗಿತ್ತು. ಗ್ರಾಮೀಣ ವಿದ್ಯುದೀಕರಣ ನಿಗಮ, ಬೆಂಗಳೂರು ರವರು 100 ಕ್ಕಿಂತ ಅಧಿಕ ಜನಸಂಖ್ಯೆ ಇರುವ ಜನವಸತಿ ಪ್ರದೇಶಗಳನ್ನು ಮಾತ್ರ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಸೇರಿಸಲು ಸೂಚಿಸಿರುತ್ತಾರೆ. ಅಂತೆಯೇ 100 ಕ್ಕಿಂತ ಅಧಿಕ ಜನಸಂಖ್ಯೆ ಇರುವ ಜನವಸತಿ ಪ್ರದೇಶಗಳನ್ನು ಒಳಗೊಂಡ ಪರಿಷ್ಕೃತ ಜಿಲ್ಲಾವಾರು ವಿವರವಾದ ಯೋಜನಾ ವರದಿಯನ್ನು ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಪತ್ರ ಸಂಖ್ಯೆ ಇಎನ್ 52 ಇಇಬಿ 2005 ದಿನಾಂಕ : 7–6–2008ರ ಮೂಲಕ ಗ್ರಾಮೀಣ ವಿದ್ಯುದೀಕರಣ ನಿಗಮ, ಬೆಂಗಳೂರು ರವರಿಗೆ ಸಲ್ಲಿಸಲಾಗಿದೆ.

ಜಿಲ್ಲಾವಾರು ವಿವರವಾದ ಯೋಜನಾ ವರದಿಯ ವಿವರ ಈ ಕೆಳಕಂಡಂತಿದೆ.

ಜಿಲ್ಲೆ	ಅನುದಾನದ ವಿವರ (ರೂ. ಕೋಟಿಗಳಲ್ಲಿ)
ದಕ್ಷಿಣ ಕನ್ನಡ	83.14
ಉಡುಪಿ	42.41
ಶಿವಮೊಗ್ಗ	54.25
ಚಿಕ್ಕಮಗಳೂರು	48.30
ಒಟ್ಟು	**228.10**

ಅನುದಾನವು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಿರುತ್ತದೆ.

ನಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಪೂಜಾರಿ.ಹೆಚ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 36ಕ್ಕೆ ಅನುಬಂಧ

ಉಡುಪಿ ಜಿಲ್ಲೆಯಲ್ಲಿ ವಿದ್ಯುದ್ದೀಕರಿಸಲು ಯೋಜನೆ ಇರುವ ಹ್ಯಾಮ್ಲೆಟ್‌ಗಳ ವಿವರಗಳು

ಕ್ರ. ಸಂ.	ಗ್ರಾಮದ ಹೆಸರು	ಹ್ಯಾಮ್ಲೆಟ್‌ನ ಹೆಸರು	ವಿದ್ಯುತ್ ಸಂಪರ್ಕ ಪಡೆಯಲಿರುವ ಫಲಾನುಭವಿಗಳ ಸಂಖ್ಯೆ	ವಿದ್ಯುತ್ ಮಂಜೂರಾತಿಯ ವರ್ಷ	ಪ್ರಗತಿಯ ವಸ್ತು ಸ್ಥಿತಿ ವಿವರ
1	ಬೆಳ್ಳಾಡಿ	ಆರಾಡಿ ಮಚ್ಚಗೆ ಬೈಲು	9	2006-07	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
2	ಹಿಲಿಯಾಣ	ಗರಡಿ ಹಾಗೂ ಅಮ್ರಕಲ್ಲು	12	2006-07	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
3	ವಂಡಾರು	ಕೆಳಮಾರ್ವಿಯಿಂದ ಮೇಲ್‌ಮಾರ್ವಿ	34	2006-07	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ. (ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ)
4	ಮಾಳ	ಬಿಜ್ಜಾಲೆ	4	2005-06	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ. (ವಿದ್ಯುತ್ ಮಾರ್ಗ ರಕ್ಷಿತಾರಣ್ಯದಲ್ಲಿ ಹಾದು ಹೋಗುವುದರಿಂದ ಅರಣ್ಯ ಇಲಾಖೆಯ ಅನುಮತಿ ನಿರೀಕ್ಷಿಸಲಾಗುತ್ತಿದೆ.)
5	ನಾಡ್ಪಾಲು	ಬಡಾತಿಂಗಳೆ	10	2006-07	
6	ನಾಡ್ಪಾಲು	ಬಡುವಿನಮಕ್ಕಿ	7	2006-07	
7	ಕುಬ್ಜಾಡಿ	ಗುಂಡಾಣ	78	2005-06	15.6.08 ಸಂಪರ್ಕ ಕಲ್ಪಿಸಲಾಗಿದೆ
8	ಆಂವಾರು	ಬಾತ್ರುಟ	29	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
9	ಕಾವ್ರಾಡಿ	ಕರಣಿಕರ ಬೆಟ್ಟು	10	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
10	ಅಮಾಸೆಬೈಲು	ಜಂಬೆಹಾಡಿ	22	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
11	ಶೇಡಿಮನೆ	ಹತ್ತೋಳ್ಳಿ	28	2006-07	25.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
12	ಅಮಾಸೆಬೈಲು	ಜಂಬೆಹಾಡಿ 2ನೇ ಹಂತ	16	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
13	ಅಲ್ಬಾಡಿ	ಕುಟ್ಟೇರಿ, ಗಂಟುಬೇಳು	31	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
14	ಅಮಾಸೆಬೈಲು	ಬಳಮನ ಕಳಸುರಕ, ದೊಡ್ಡಜಡ್ಡು, ಗೋಳಿಕಾಡು, ರಾಮಹಕ್ಲು	162	2006-07	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ. (ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ)
15	ಅನಗಳ್ಳಿ	ದಾವುಕುದ್ರು	6	2006-07	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.
16	ಕಾರ್ಕಂಜೆ	ಚಪ್ಪರ್ಕ	11	2006-07	ಕಾಮಗಾರಿ ಪ್ರಗತಿಯಲ್ಲಿದೆ.
17	ಆಲೂರು	ಹೊಯ್ಯಾಣ	36	2006-07	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ. (ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ)
18	ಕಿರೂರು	ಆಜಾರಕೇರಿ ಮೇಲ್ಬಂತಿ	6	2006-07	ಕಾಮಗಾರಿ ಸಂಪೂರ್ಣಗೊಂಡಿದೆ.
19	ಕಾರ್ಕಂಜೆ	ಅಸೋಡು	18	2006-07	ಕಾಮಗಾರಿ ಪ್ರಗತಿಯಲ್ಲಿದೆ.
20	ಕೆರಾಡಿ	ಕುಳಂಬಳ್ಳಿ	116	2006-07	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ. (ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ)
21	ಸಾಲಿಗ್ರಾಮ ಪ.ಪಂ	ದೊಡ್ಡಮನೆದೆಬ್ಬು	6	2006-07	15.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
22	ಆರೂರು	ಬಂಗ್ಲೆಗುಡ್ಡೆ	11	2007-08	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
23	ಮರ್ಣೆ	ದೆಮ್ಮತ್ತೆ	9	2007-08	ಕಾಮಗಾರಿ ಪ್ರಗತಿಯಲ್ಲಿದೆ.
24	ಮರ್ಣೆ	ಹೆರ್ಮಂಡೆ, ಮರ್ಲಿ, ನಡುಗುಡ್ಡೆ	25	2007-08	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.
25	ಕಡ್ತಲ	ಮುಳ್ಳಕಾಲ, ಗೋಳಿಗುಡ್ಡೆ	10	2007-08	ಕಾಮಗಾರಿ ಪ್ರಗತಿಯಲ್ಲಿದೆ.
26	ಕಡ್ತಲ	ದರ್ಬುಬೆ	7	2007-08	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.
27	ಮುಡಾರು	ನೀರುಪಾದೆ	28	2007-08	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.
28	ಹೊಸ್ಕಾರು	ಬೋರುಗುಡ್ಡೆ, ಜಂಗೊಟ್ಟು	9	2007-08	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.
29	ನಲ್ಲೂರು	ಪರವಾಡಿ, ಪಾಲ್‌ದಕ್ಕೆ	13	2007-08	ಕಾಮಗಾರಿ ಕೈಗತ್ತಿಕೊಳ್ಳಬೇಕಾಗಿದೆ.

ಕ್ರ ಸಂ.	ಗ್ರಾಮದ ಹೆಸರು	ಹ್ಯಾಮ್ಲೆಟ್‌ನ ಹೆಸರು	ವಿದ್ಯುತ್ ಸಂಪರ್ಕ ಪಡೆಯಲಿರುವ ಫಲಾನುಭವಿಗಳ ಸಂಖ್ಯೆ	ವಿದ್ಯುತ್ ಮಂಜೂರಾತಿಯ ವರ್ಷ	ಪ್ರಗತಿಯ ವಸ್ತು ಸ್ಥಿತಿ-ವಿವರ
30	ನಲ್ಲೂರು	ಕೊರಿಯಾಲು	10	2007–08	ಕಾಮಗಾರಿ ಪ್ರಗತಿಯಲ್ಲಿದೆ.
31	ಯರ್ಲಪಾಡಿ	ಕುಕ್ಕಡ	6	2007–08	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
32	ಜಪ್ತಿ	ಪ.ಜಾ.ಕಾಲೋನಿ	5	2006–07	1.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
33	ಜಡ್ಕಲ್	ಮುದ್ಗುರುಮ	36	2006–07	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
34	ನಾಡ	ರಾಮನಗರ	5	2007–08	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
35	ಹಟ್ಟಿಯಂಗಡಿ	ಕರ್ಕಗುಡ್ಡೆ	6	2007–08	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
36	ಬೈಂದೂರು	ತೊಂಡಮಕ್ಕಿ	10	2007–08	24.5.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
37	ಬೈಂದೂರು	ಗುಡ್ಡೆಯಂಗಡಿ, ಹಗ್ಗೇರಿ	30	2007–08	ಕಾಮಗಾರಿ ಪ್ರಗತಿಯಲ್ಲಿದೆ.
38	ಕುಂಜಾಲು	ಕೆಳಕರ್ಜೆ	7	2007–08	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
39	ಬೇಳ್ಕಾಡಿ	ಹುತ್ತಿವರುದೆಟ್ಟು	9	2007–08	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
40	ಕುಂಜಾಲು	ನೀಲಾವರ ಗುಡ್ಡೆ	8	2007–08	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
41	ಕರ್ಜೆ	ಹುಲಿಕಲ್	3	2007–08	20.6.08 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
42	ಹಳ್ಳಿಹೊಳೆ	ಕೆರ್ಕಾಡು	8	2007–08	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
43	ಚಿತ್ತೂರು	ಕಟ್ಟುಕೊಡ್ಲು	5	2007–08	ಕಾಮಗಾರಿ ಸಂಪೂರ್ಣಗೊಂಡಿದೆ
44	ಚಿತ್ತೂರು	ತಂಕೂರು	5	2007–08	ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ.
45	ಚಿತ್ತೂರು	ದಾಸ್‌ಮೇರಿ	6	2007–08	ಕಾಮಗಾರಿ ಸಂಪೂರ್ಣಗೊಂಡಿದೆ.

45(38) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಈ ತನಕ ಕರ್ನಾಟಕ ರಾಜ್ಯದ ಯಾವ ಯಾವ ಪಂಚಾಯತ್‌ಗಳಲ್ಲಿ ಸುವರ್ಣ ಗ್ರಾಮ ಯೋಜನೆ ಅನುಷ್ಠಾನ ಮಾಡಲಾಗಿದೆ ; ಅವುಗಳಿಗೆ ಒದಗಿಸಲಾದ ಅನುದಾನ ಮತ್ತು ಸಾಧನೆ ಎಷ್ಟು ;

ಆ) ಕಾರ್ಕಳ ತಾಲ್ಲೂಕಿನಲ್ಲಿರುವ ಹೆಬ್ರಿ ಗ್ರಾಮ ಪಂಚಾಯತಿಯನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಮೊದಲ ಪಟ್ಟಿಯಲ್ಲಿ ಆಯ್ಕೆ ಮಾಡಿ ಸದಸ್ಯರಿಗೆ ತರಬೇತಿಯನ್ನು ಕೊಟ್ಟು ಸ್ವಯಂ ಸೇವಾ ಸಂಸ್ಥೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಿಂದ ಸಮೀಕ್ಷೆ ನಡೆಸಿದ ನಂತರ ಅದನ್ನು ರದ್ದುಪಡಿಸಲು ಕಾರಣವೇನು ;

(ಇ) ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ಮೂಲಕ ಸಾರ್ವಜನಿಕರು ದಾಖಲು ಮಾಡಿದ ರಿಟ್ ಪಿಟಿಷನ್‌ನಲ್ಲಿ ನ್ಯಾಯಾಲಯ ಮಾಡಿದ ಆದೇಶದಂತೆ ಹೆಬ್ರಿ ಗ್ರಾಮ ಪಂಚಾಯತ್‌ನ್ನು ಸುವರ್ಣ ಗ್ರಾಮ ಯೋಜನೆಗೆ ಸೇರಿಸಲು ಕೈಗೊಂಡ ಕ್ರಮವೇನು ?